(ಇ) ಮೊದಲನೆಯ ಅಥವಾ ಎರಡನೆಯ ರ್‍ಯಾಂಕ್ ಗಳಿಸಿದ SC/ST ಅಭ್ಯರ್ಥಿಗಳಿಂದ ಕ್ಲಾಸ್ (I) ಅಥವಾ ಕ್ಲಾಸ್ (II) ನೇ ದರ್ಜೆ ಹುದ್ದೆಗೆ ನೇರ ನೇಮಕಾತಿ.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :- ನೇರ ನೇಮಕಾತಿಯ ಬಗ್ಗೆ ನೀವು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೀರಿ.

Mr. SPEAKER :- Regarding direct rederuitment of SC/STS to class I & II posts, from those who have secured 1st rank, the Government was expected to give replay.

SRI M. C. NANAHIAH :- Regarding what...

Mr. SPEAKER :- The Government had committed on the FLoor of the House that you would come back with reply the next day. We are in the 3rd day.

+ **ಶ್ರೀ ಎಂ. ಸಿ. ನಾಣಯ್ಯ** :- ಸರ್, We have got the reply, ಈಗ ಫಸ್ಟ್ ರ್‍ಯಾಂಕ್, ಸೆಕೆಂಡ್ ರ್‍ಯಾಂಕ ಬಂದಿರತಕ್ಕಂಥ ಮಕ್ಕಳಿಗೆ ನೇರ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕೆ ಒಂದು ಕಾನೂನನ್ನು 1985 ನೇ ಇಸವಿಯಲ್ಲಿ ನಾವು ಜಾರಿಗೆ ತಂದಿದ್ದೇವು. I will read the gist of the report. ಸಿವಿಲ್ ಸೇವೆಗಳಲ್ಲಿ ಕೆಲವೊಂದು ಗುಂಪು 'ಎ' ಗುಂಪು ಬಿ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯತೆಯಲ್ಲಿ ಶೇಕಡವಾರು ಕೊರತೆ ಇದ್ದಲ್ಲಿ ಅದನ್ನು ಸರಿದೂಗಿಸಲು ಉದ್ದೇಶಿಸಿ ಸರ್ಕಾರವು, ಕರ್ನಾಟಕ ಸಿವಿಲ್ ಸೇವೆಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ಕೆಲವೊಂದು ಗುಂಪು ಎ ಗುಂಪು ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮ 85 ಅನ್ನು 1985 ರಲ್ಲಿ ರೂಪಿಸಿ ದಿನಾಂಕ : 11-4-1985 ರಲ್ಲಿ ಜಾರಿಗೆ ತರಲಾಯಿತು. ಈ ನಿಯಮಗಳು 1982-83ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುತ್ತದೆ ಮತ್ತು ಇದರ ಅನುಸಾರ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಶೇಕಡವಾರು ಪ್ರಾತಿನಿಧ್ಯತೆಯಲ್ಲಿನ ಕೊರತೆಗೆ ಅನುಗುಣವಾಗಿ ನೇಮಕ ಮಾಡಬಹುದಾಗಿದೆ. ಮೇಲಿನ ನಿಯಮದ ಕಾನೂನು ಬದ್ಧತೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಕರ್ನಾಟಕ ಆಡಳಿತ ನ್ಯಾಯಮಂಡಳಿ ದಿನಾಂಕ : 1-4-1989 ರ ತೀರ್ಪಿನಲ್ಲಿ ನಿಯಮಗಳನ್ನು ಎತ್ತಿ ಹಿಡಿದಿದೆ. ಇದಾದ ನಂತರ ಆಡಳಿತ ನ್ಯಾಯಮಂಡಳಿ ಗಮನಿಸಿರುವ ಅಂಶಗಳ ನೆರವಿನಲ್ಲಿ ಅಧಿಕೃತಜ್ಞಾಪನಾ ಸಂಖ್ಯೆಯ ದಿನಾಂಕ : 7-9-1989 ರಲ್ಲಿ ನಿಯಮಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಯಿತು. ಸದರಿ ಅಧಿಕೃತಜ್ಞಾಪನದಲ್ಲಿ ಎಂಎ, ಎಂಎಸ್ಸಿ, ಎಂ.ಕಾಂ ಹೊರತುಪಡಿಸಿ ನಿಯಮಗಳಲ್ಲಿರುವ ಇತರೆ ಪದವೀಧರರಿಗೆ ನೇಮಕಾತಿಯನ್ನು ನೀಡುವ ಅಧಿಕಾರವನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಕೊಡಲಾಗಿದೆ. ಎಂಎ, ಎಂಎಸ್ಸಿ ಮತ್ತು ಎಂ.ಕಾಂ ಸ್ನಾತಕೋತ್ತರ ಪದವೀಧರರ ನೇಮಕಾತಿಯ ರೀತ್ಯಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ವ್ಯವಹರಿಸಲಾಗಿತ್ತಿದೆ. ಗುಂಪು (ಎ) ವರ್ಗದಲ್ಲಿ ಗರಿಷ್ಠ ಹದಿನೈದು ಹುದ್ದೆಗಳಿಗೆ, ಹಾಗೂ ಗುಂಪು (ಬಿ) ವರ್ಗದಲ್ಲಿ ಗರಿಷ್ಠ ಮೂವತ್ತು ಹುದ್ದೆಗಳಿಗೆ,

ಕೊರತೆಗೆ ಅನುಗುಣವಾಗಿ ನೇಮಕ ಮಾಡಬಹುದಾಗಿದೆ. ಆದರಂತೆ 1982-83 ನೇ ಸಾಲಿನ ಆಯ್ಕೆಯನ್ನು, ಅಂದು ನಿಯಮಾನುಸಾರ ಅಸ್ತಿತ್ವದಲ್ಲಿದ್ದ ಆಯ್ಕೆ ಮಂಡಳಿಯ ಮುಖೇನ 1991 ರಲ್ಲಿ ನಲವತ್ತು ಜನರನ್ನು ಆಯ್ಕೆ ಮಾಡಲಾಯಿತು. ತದನಂತರ ದಿನಾಂಕ : 4-3-1993 ರಂದು ನಿಯಮಗಳಿಗೆ ತಿದ್ದುಪಡಿಯನ್ನು ತಂದು ಅಭ್ಯರ್ಥಿಗಳನ್ನು ಅವರ ಅರ್ಹತೆಯ ಮೇರೆಗೆ ಸರ್ಕಾರವೇ ಆಯ್ಕೆ ಮಾಡುವ ವಿಧಾನವನ್ನು ಜಾರಿ ಗೊಳಿಸಲಾಯಿತು. ಇದರ ಅನುಸಾರ 1983-84 ನೇ ಸಾಲಿನಲ್ಲಿ ಕೊರತೆ ಇದ್ದ ಏಳು ಸ್ಥಾನಗಳಿಗೆ ಆಯ್ಕೆ ಮಾಡಿ ನೇಮಕ ಮಾಡಲಾಗಿದೆ. ಪ್ರಸ್ತುತ 1984-85 ರಿಂದ 1994-95 ಶೈಕ್ಷಣಿಕ ವರ್ಷದವರೆಗಿನ ಆಯ್ಕೆಯ ಬಗ್ಗೆ ಪ್ರಕ್ರಿಯೆ ಜಾರಿಯಲ್ಲಿದೆ. ಮಾನ್ಯ ಸಭಾಧ್ಯಕ್ಷರೆ, ಈಗ ಜಾರಿಯಿಲ್ಲವೆಂದು, ಕೊರತೆ ಎಷ್ಟಿದೆ ಎಂದು ಹೇಳುತ್ತಿರಕ್ಕಂಥದ್ದನ್ನು ಪ್ರತಿ ಇಲಾಖೆ ಕಳುಹಿಸಿ, ಎಷ್ಟು ಕೊರತೆ ಇದೆ ಎನ್ನುವುದನ್ನು ಇಲಾಖೆಗಳಿಂದ ತರಿಸಲಾಗಿದೆ. ಇದರಲ್ಲಿ 1984-85 ರಿಂದ 1991-92 ರವರೆಗೆ ಯಾವ ಗುಂಪಿನಲ್ಲೂ ಕೂಡ ಕೊರತೆಯಿಲ್ಲ. 1992-93 ಕ್ಕೆ ಸಂಬಂಧಪಟ್ಟ ಹಾಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿ ಗುಂಪು (ಬಿ) ನಲ್ಲಿ ಎಸ್‌ಟಿ.ಗೆ ಒಂದು ಹುದ್ದೆ ಇದೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಲೀಗಲ್ ಮೆಟ್ರಾಲಜಿಯಲ್ಲಿ ಗುಂಪು (ಬಿ) ನಲ್ಲಿ ಎಸ್‌ಟಿ.ಗೆ ಒಂದು ಹುದ್ದೆ ಇದೆ. 1993-94 ನೇ ಸಾಲಿನಲ್ಲಿ ಡಿಸ್ಟ್ರಿಕ್ಟ್ ಆಫೀಸರ್, ಎಸ್‌ಸಿ. ಎಸ್‌ಟಿ. ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಗುಂಪು (ಬಿ) ನಲ್ಲಿ ಎಸ್‌ಸಿ.ಗೆ ಒಂದು ಹುದ್ದೆ ಖಾಲಿ ಇದೆ. ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫಿಸರ್, ಈಗ ಎಸಿಟಿಓ, ಗುಂಪು ಬಿ ನಲ್ಲಿ ಎಸ್‌ಸಿ ಹುದ್ದೆ ಒಂದು ಖಾಲಿ ಇದೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಯುತ್ ಸರ್ವೀಸಸ್, ಗುಂಪು ಬಿ ನಲ್ಲಿ ಎಸ್‌ಸಿ ಹುದ್ದೆ ಒಂದು ಖಾಲಿ ಇದೆ. ಮಾನ್ಯ ಸಭಾಪತಿಗಳೇ, ಈಗ 1985 ರ ನಿಯಮಗಳ ಪ್ರಕಾರ ಆ ರೂಲ್ 5 ರಲ್ಲಿ ಏನಿದೆ ಎಂದರೆ, ವ್ಯಾಲಿಡಿಟಿ ಆಫ್ ದೀಸ್ ರೂಲ್ಸ್ ಏನ್ನುವುದು ಒಂದು ಇದೆ. ಅದನ್ನು 1985 ರಲ್ಲಿ ಮಾಡಿರತಕ್ಕಂಥದ್ದು. ಆ 1985 ರ ನಿಯಮಗಳಿಗೆ ಅನುಸಾರವಾಗಿ period of validity of these rules, ಇದನ್ನು 1985 ರ ಮಾರ್ಚ್ 27 ರಲ್ಲಿ ಮಾಡಿರತಕ್ಕಂಥದ್ದು. ಆ ರೂಲ್ 5 ರಲ್ಲಿ ಏನು ಹೇಳುತ್ತದೆ ಎಂದರೆ,

> ``These rules shall remain in force in respective each of the cadres specified in Column No. 4 of the schedule until the representation of SC/ST dandidated in such cadre reach 15 % and 3% respectively".

ಯಾವುದಾದರೂ ಒಂದು ವರ್ಷದಲ್ಲಿ ಹದಿನೈದು ಪರ್ಸೆಂಟ್, ಮೂರು ಪರ್ಸೆಂಟ್ ಫಿಲ್‌ಅಪ್ ಆದರೆ ಆಲ್ಲಿಂದ ಈ ರೂಲ್ಸ್ ರಿಡೆಂಡೆಂಟ್ ಆಗುತ್ತದೆ. ಆದರೆ ಇದರ ಪರಿಣಾಮ ಏನಾಯಿತು ಎಂದರೆ, ಈಗಿರತಕ್ಕಂಥ ಹುದ್ದೆಗಳನ್ನು ತುಂಬಬೇಕಾದರೂ ಕೂಡ ಈ ನಿಯಮದ ಅಡಿಯಲ್ಲಿ ಈಗ ತುಂಬುವದಕ್ಕೆ ಬರುವುದಿಲ್ಲವೆಂದು ಇದನ್ನು ಸಚಿವ ಸಂಪುಟದ ಸಭೆಯ ಮುಂದೆ ನಾವು ತಂದು ಈ ನಿಯಮಕ್ಕೆ ತಿದ್ದುಪಡಿಯನ್ನು ತರುವುದಕ್ಕೂ ಕೂಡ ನಾವು ಈಗಾಗಲೇ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಆದುದ ರಿಂದ, ಈ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟಿವೆ ಎಂದು ನಾವು ಹೇಳಿದ್ದೆವು, ಇದನ್ನು ಈಗಿರತಕ್ಕಂಥ ಎಂಬತ್ತೈದನೆ ಸಂವಿಯಲ್ಲಿ ಪ್ರಾರಂಭಮಾಡಿ ಆದ ಮೇಲೆ, ಇವತ್ತು

ಏನಾಗಿದೆ ಎಂದರೆ, ಈ ರೂಲ್ ಯಾವುದಿದೆ, ಅದರ ವ್ಯಾಲಿಡಿಟಿ ಆಫ್ ರೂಲ್ ಎನ್ನುವುದು ಬಂದಾಗ, ಒಂದು ಸಲ ಆ ಬ್ಯಾಕ್‌ಲಾಗ್, ಅಂದರೆ ಹದಿನೈದು ಪರ್ಸೆಂಟ್, ಮೂರು ಪರ್ಸೆಂಟ್ ಕೊರತೆ ಯಾವುದಾದರೂ ಒಂದು, ನಿರ್ದಿಷ್ಟ ವರ್ಷದಲ್ಲಿ ಫಿಲ್ ಆಫ್ ಆದರೆ subsequently those rules will become redundant ಎಂದು ಮಾಡಿದ್ದಾರೆ. ಆದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಈ ರೂಲ್ ಇದೆ, ಇದಕ್ಕೆ ತಿದ್ದುಪಡಿಯನ್ನು ತಂದು ಸಧ್ಯಕ್ಕೆ ಈಗಿರತಕ್ಕಂಥ ಹುದ್ದೆಗಳು ಎಷ್ಟು ಖಾಲಿ ಇವೆ ಅವನ್ನು ತುಂಬಲ್ಲಿಕ್ಕೆ ಇರುವ ಪ್ರಕ್ರಿಯೆ ಬಗ್ಗೆ, ಇದನ್ನು ನಾವು ಸಚಿವ ಸಂಪುಟದ ಮುಂದೆ ತಂದಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಇವರು ಒಂದು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಇನ್ನೊಂದು, ನಾನು ನನ್ನ ಗಮನಸೆಳೆಯುವ ಸೂಚನೆಯಲ್ಲಿ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಿದ್ದು, ಹುದ್ದೆಗಳು ಖಾಲಿ ಇದ್ದಂಥ ಸಂದರ್ಭದಲ್ಲಿ, ಯಾವ ಯಾವ ಪ್ರಮುಖ ಇಲಾಖೆಗಳಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇದ್ದಾಗ ಎಸ್‌ಸಿ. ಎಸ್‌ಟಿ. ಅಭ್ಯರ್ಥಿಗಳನ್ನು ನೇಮಕ ಮಾಡುವುದಿಲ್ಲ. ಯಾವುದೇ ಕೆಲಸಕ್ಕೆ ಬಾರದ ಇಲಾಖೆಯಾದ ವೇಟ್ ಅಂಡ್ ಮೆಷರ್ಸ್ ಎಂದು ಇದ್ದರೆ ಅದಕ್ಕೆ ಬೇಕಾದರೆ ಖಾಲಿ ಇದ್ದರೆ ಒಬ್ಬರು ಇಬ್ಬರನ್ನು ಕಳುಹಿಸುತ್ತಾರೆ. ಆದರೆ ಪ್ರಮುಖವಾದ ಸ್ಥಾನಗಳನ್ನು ಭರ್ತಿ ಮಾಡತಕ್ಕಂಥ ಸಂದರ್ಭದಲ್ಲಿ ಅವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ನಾನು ಹೇಳಿದ್ದೆ. ಅದಕ್ಕೆ ನನಗೆ ಉತ್ತರ ಸಿಕ್ಕಿಲ್ಲ, ಅದಕ್ಕೆ ಉತ್ತರ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ :- 1985 ಮಾರ್ಚ್ 22 ರಲ್ಲಿ ನೀವು ಈ ರೂಲ್ಸ್‌ಅನ್ನು ಜಾರಿಗೆ ತೆಗೆದುಕೊಂಡು ಬಂದಿರಿ, ಸ್ವಾಮಿ, ಇದು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಹೈಕೋರ್ಟಿನಲ್ಲೂ ಗೆದ್ದಿದೆ. ಸುಪ್ರೀಂ ಕೋರ್ಟಿಗೆ ಹೋಗಿದೆ ಅವರೂ ಒಪ್ಪಿಗೆ ಯನ್ನು ಕೊಟ್ಟಿದ್ದಾರೆ. ಅಂದ ಮೇಲೆ ಜಾರಿಗೂ ತಂದಿದ್ದೀರಿ. ಮಧ್ಯೆ ನಿಲ್ಲಿಸುವುದಕ್ಕೆ ಏನು ಕಾರಣ? ನೀವು 1975 ನೇ ಇಸವಿಯದು ಇಂಟರ್ ಪ್ರಿಟೇಷನ್ ಮಾಡುವುದು, ಇದೇ ಬಂದಿರುವುದು 1994 ನೇ ಇಸವಿಯಲ್ಲಿ. ಈಗ ಉದ್ದೇಶಪೂರ್ವಕವಾಗಿ ಅಲ್ಲವೆಂದರೆ ನೀವು ಕೋಪಿಸಿಕೊಳ್ಳುತ್ತೀರಿ? ಇದನ್ನು ಆಲೋಚನೆ ಮಾಡಿ ; ರೆಪ್ರಸೆಂಟೇಷನ್ ಪೋಲಿಸ್ ಡಿಪಾರ್ಟ್‌ಮೆಂಟ್‌ನಿಲ್ಲಿ ಇದೆಯೇ? ಸ್ವಾಮಿ ಪೋಲಿಸ್ ಡಿಪಾರ್ಟ್‌ಮೆಂಟ್‌ನಲ್ಲಿ ರೆಪ್ರಸೆಂಟೇಷನ್ ಇದೆಯೋ? ಎಷ್ಟು ಇಲಾಖೆಯಲ್ಲಿದೆ? ನಾನು ಹೇಳುತ್ತಿದ್ದೇನೆ, not even 5 or 6% ನಿಮ್ಮಲ್ಲಿರತಕ್ಕಂಥ ನಲವತ್ತು ಡೆವಲಪ್‌ಮೆಂಟ್ ಇಲಾಖೆಗಳಲ್ಲಿ ಎಲ್ಲಿದೆ ಎನ್ನುವುದನ್ನು ತೋರಿಸಿ? ಏತಕ್ಕೆ ಸರ್ಕಾರ ಹಾಗೆ ಅನ್ವಯಿಸುವುದಿಲ್ಲ? ಉದ್ದೇಶಪೂರ್ವಕವಾಗಿ ನೀವು ಮಾಡುತ್ತಿದ್ದಿರೋ? ರೂಲ್‌ಅನ್ನು ಮಿಸ್ ಇಂಟರ್ ಪ್ರಿಟೇಷನ್ ಮಾಡುತ್ತಿದ್ದೀರಿ ಷೆಡ್ಯೂಲ್ ಕಾಸ್ಟ್‌ಗೆ ಏಟು ಕೊಡತಕ್ಕಂಥ ಒಬ್ಬರನ್ನು ಡಿಪಿಎಆರ್‌ನಲ್ಲಿ ಇಟ್ಟುಕೊಂಡು, ಅವರ ಕೈಯಲ್ಲಿ ಬರೆಸಿಬಿಟ್ಟು ಇದನ್ನು ಜಾರಿಗೆ ತರುವುದಕ್ಕೆ ನೀವು ಆಲೋಚನೆಯನ್ನು ಮಾಡುತ್ತಿದ್ದೀರಿ. ಉದ್ದೇಶಪೂರ್ವಕವಾಗಿ ಅಲ್ಲ ; ದುರುದ್ದೇಶದಿಂದ ಎಂದು ಹೇಳುತ್ತಿದ್ದೇನೆ.

ಶ್ರೀ. ಜೆ. ಹೆಚ್. ಪಟೇಲ್ :- ಏತಕ್ಕೆ ನೀವು ಇಷ್ಟೊಂದು ಸಿಟ್ಟನ್ನು ಮಾಡಿಕೊಳ್ಳುತ್ತೀರಿ?

ಶ್ರೀ ವೈ. ರಾಮಕೃಷ್ಣ :- ಸ್ವಾಮಿ ಆಗಿರತಕ್ಕಂಥ ವಿಷಯವನ್ನು ನಾನು ಹೇಳುತ್ತಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ಡಿಸಿಷನ್ ಆಗಿದ್ದನ್ನು ಒಂದು ಕ್ಯಾಬಿನೆಟ್ ಡಿಸಿಷನ್ ಕಿತ್ತು ಬಿಸಾಕುವುದಕ್ಕಾಗುತ್ತದೆಯೇ? ಮತ್ತೆ ಯೋಚನೆ ಮಾಡಿ.

ಶ್ರೀ ಜೆ. ಹೆಚ್. ಪಟೇಲ್ :- ಇಲ್ಲ, ಇಲ್ಲ. ಅಲ್ಲಿ ಮಾನ್ಯ ಕಾನೂನು ಸಚಿವರು ರೂಲ್‌ಗೆ ಸಂಬಂಧಿಸಿದಂತೆ ಏನು ಹೇಳಿದರು, ಆ ರೂಲ್ ಅಡ್ಡಿ ಬಂದರೆ ಅದನ್ನು ತೆಗೆದುಹಾಕಿ, ನಾವು ಈ ಕೆಲಸವನ್ನು ಮಾಡುತ್ತೇವೆ. ಎಂದು

ಶ್ರೀ ವೈ. ರಾಮಕೃಷ್ಣ :- 1985 ರಲ್ಲಿ ರೂಲ್ ಅಡ್ಡಿ ಇತ್ತಲ್ಲಾ, ಈ ಆರ್ಡರ್ ಬರುವಾಗ್ಗೆ ಆ ರೂಲ್ ಇತ್ತಲ್ಲಾ; ಅದನ್ನು ಏತಕ್ಕೆ ಯೋಚನೆ ಮಾಡಲಿಲ್ಲ ಎಂದು ನಾನು ಕೇಳಿದ್ದುದು.

ಶ್ರೀ ಜೆ. ಹೆಚ್. ಪಟೇಲ್ :- ಈಗ ಆಯಿತಲ್ಲಾ ಸ್ವಾಮಿ, ಆಗ ಕಾನೂನನ್ನು ಮಾಡಿದ್ದೇ ನಾವು.

ಶ್ರೀ ವೈ. ರಾಮಕೃಷ್ಣ :- ಆ ಪ್ರಶ್ನೆ ಬೇರೆ. ಕಾನೂನನ್ನು ಯಾರೇ ಮಾಡಿರಲಿ ಆಗಿನ ಸರ್ಕಾರ ಮಾಡಿತು; ನೀವೇ ಮಾಡಿದ್ದೀರಿ, ನಾನು ಇಲ್ಲವೆಂದು ಹೇಳಲಿಲ್ಲ. ಈಗ ನೀವೇನು ಅದನ್ನು ನಿಲ್ಲಿಸಬೇಕೇ? ನೀವು ಹೇಗೆ ನಿಲ್ಲಿಸುತ್ತೀರಿ? The validity was questioned before the Supreme Court and the Supreme Court cleared it ಸುಪ್ರೀಂ ಕೋರ್ಟ್ ಕೇಳಲಿ, ಹಾಗಾದರೆ ಈಗ ಇದನ್ನು ಏತಕ್ಕೆ ನಿಲ್ಲಿಸಿದ್ದೀರಿ?

ಶ್ರೀ ಜೆ. ಹೆಚ್. ಪಟೇಲ್ :- ಅವರು ಹೇಳಿದ್ದು ಏನೆಂದರೆ ನಾವು ಮಾಡುವ ಉದ್ದೇಶವಿದ್ದರೂ, ಆ ರೂಲನ್ನು ತಿದ್ದದ ಹೊರತು ಮಾಡುವುದಕ್ಕೆಬರುವುದಿಲ್ಲ ಎಂದು ಈಗ ಅದನ್ನು ಮಾಡುತ್ತೇವೆ. ಅದಕ್ಕೆ ಏಕೆ ಸುಮ್ಮನೆ ಆರ್ಗ್ಯೂಮೆಂಟ್?.

ವಿಷಯ :- (ಈ) ಸೋಮವಾರ ಪೇಟೆಯಲ್ಲಿ ಕಳಪೆ ಅಕ್ಕಿ ಸರಬರಾಜು ಆಗುತ್ತಿರುವ ಬಗ್ಗೆ.

+ **ಶ್ರೀ ಬಿ. ಎಸ್. ಯಡಿಯೂರಪ್ಪ** :- ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅಪ್ಪಚ್ಚು ರಂಜನ್‌ರವರು, ಸೋಮವಾರಪೇಟೆಯಲ್ಲಿ ಕಳಪೆ ಅಕ್ಕಿ ಸರಬರಾಜಾಗುತ್ತಿದೆ ಎಂದು ಇಲ್ಲಿ ಪ್ರಸ್ತಾಪ ಮಾಡಿದಾಗ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದರ ಬದಲಾಗಿ ಇವತ್ತು ಸೋಮವಾರಪೇಟೆ ಗ್ರಾಹಕರ ಸ್ಟೋರ್ಸ್‌ನ ಲೈಸನ್ಸ್‌ನ್ನು ರದ್ದು ಮಾಡಿದ್ದಾರೆ. ತಾವು ಸಚಿವರಿಗೆ ಆದೇಶ ಕೊಟ್ಟಿರಿ, ಅವರನ್ನು ಸಸ್ಪೆಂಡ್ ಮಾಡಿ. ಆ ಅಧಿಕಾರಿಯನ್ನು ಎಂದು. ಈ ರೀತಿ ಸದನದಲ್ಲಿ ಈ ತರಹದ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಬದಲಾಗಿ ಇನ್ನೊಬ್ಬನಿಗೆ ಕಿರುಕುಳ ಕೊಡುವಂಥ ಈ ಪ್ರವೃತ್ತಿ ಏನಿದೆ ಇದು ಸರಿಯಲ್ಲ ಎಂದು ಹೇಳಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ಹೇಳಿದ ಮೇಲೆ ಸಸ್ಪೆಂಡ್ ಮಾಡುವುದಕ್ಕೆ ಎಷ್ಟು ನಿಮಿಷ ಬೇಕು ಸ್ವಾಮಿ? ಒಂದು ನಿಮಿಷ ಸಾಕು. ಒಂದು ಕಾಗದದಲ್ಲಿ ಟೈಪ್ ಮಾಡಿಸಿ ತಾವು ಆದೇಶ ಕೊಟ್ಟಂತೆ ಮಾಡಬೇಕು ಎಂದು ಛೇರ್ ನಿಂದ ಆದೇಶ ಬಂತು. ಸಸ್ಪೆನ್ಷನ್ ಆಗಿದೆಯೇ, ಇಲ್ಲವೇ, ಸರ್ಕಾರದಿಂದ ಏನಾಗಿದೆ ಎನ್ನುವುದನ್ನು ತಿಳಿಯುವುದಕ್ಕೆ ನಾನು ಇಚ್ಛಿಪಡುತ್ತೇನೆ.